ನಿಯಂತ್ರಿಸುತ್ತದೆ, ಅಧಿಕಾರದ ಮಹತ್ವವನ್ನು ಪ್ರಭಾವಿಸುತ್ತದೆ. ರಾಜಪ್ರಭುತ್ವದಲ್ಲಿ ಇದು ಹೆಚ್ಚು ಅರ್ಥವಾಗುತ್ತದೆ.

ನಾವೀಗ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬದುಕುತ್ತಿರುವುದರಿಂದ, ಭಾಷೆಯನ್ನು ಸರ್ಕಾರದ ಚುಕ್ಕಾಣಿ ಹಿಡಿದಿರುವವರ 'ಅಧಿಕಾರದ ಭಾಷೆ' ಎನ್ನುವುದಕ್ಕಿಂತ 'ಆಡಳಿತ ಭಾಷೆ' ಎನ್ನುವುದು ಅತ್ಯಂತ ಸೂಕ್ತವಾದ ಬಳಕೆಯಾಗಿದೆ. ಪ್ರಜಾಪ್ರಭುತ್ವದಲ್ಲಿ ಅಧಿಕಾರದ ಭಾಷೆ ಎನ್ನುವ ಪ್ರಯೋಗವೇ ತಪ್ಪು. ಏಕೆಂದರೆ, ವಸಾಹತುಶಾಹಿ, ಸಾಮ್ರಾಜ್ಯಶಾಹಿ, ಊಳಿಗಮಾನ್ಯ ಪದ್ಧತಿಗಳಲ್ಲಿ ಅಧಿಕಾರದ ಭಾಷೆಯು ಪ್ರಭುತ್ವವನ್ನೇ ಪ್ರತಿನಿಧಿಸುತ್ತದೆ. ವ್ಯಕ್ತಿ, ಸಮುದಾಯ, ವರ್ಗ, ಲಿಂಗ, ಧರ್ಮ, ಭಾಷೆ, ಜನಾಂಗ, ಪ್ರದೇಶ, ವರ್ಣ, ಮೊದಲಾದ ವಿಚಾರಗಳಲ್ಲಿ ವೈವಿಧ್ಯವನ್ನು ಹೊಂದಿರುವ ಹಾಗೂ ಇದೇ ಅಂಶಗಳ ಕಾರಣಕ್ಕಾಗಿ ಆಗಾಗ್ಗೆ ಸಂಘರ್ಷಗಳನ್ನು, ವೈಷಮ್ಯಗಳನ್ನು ಕಾಣಬೇಕಾಗುತ್ತಿರುವ ಸಂದರ್ಭಗಳಲ್ಲಿ ಅಧಿಕಾರವನ್ನು ಭಾಷೆಯಲ್ಲಿ ತರುವುದು ತಪ್ಪು ಪ್ರಯೋಗವಾಗುತ್ತದೆ ಅಥವಾ ಅನುಚಿತ ಕ್ರಮವಾಗುತ್ತದೆ.

ಭಾರತದಂತಹ ಒಕ್ಕೂಟ ವ್ಯವಸ್ಥೆಯಲ್ಲಿ ಭಾಷೆಯ ಹಿನ್ನೆಲೆಯಲ್ಲಿಯೇ ಪ್ರಾಂತ್ಯ/ರಾಜ್ಯಗಳು ರಚನೆಯಾಗಿರುವ ದೃಷ್ಟಿಯಿಂದ ನೋಡುವುದಾದರೆ, 'ಅಧಿಕಾರದ ಭಾಷೆ' ಎನ್ನುವ ಪ್ರಯೋಗ ವಿವೇಚನಾಯುಕ್ತವಾದುದಲ್ಲ. ಪುನಃ ಮೇಲುಕೀಳಿನ ಸಂಘರ್ಷವೇ ಮುನ್ನೆಲೆಗೆ ಬರುತ್ತದೆ. ಆದ್ದರಿಂದ ಅಧಿಕಾರದ ಭಾಷೆಯಾಗಿಯಲ್ಲ, 'ಆಡಳಿತದ ಭಾಷೆಯಾಗಿ ಕನ್ನಡ' ಎನ್ನುವುದೇ ಹೆಚ್ಚು ಸರಿಯಾದುದು.

ಸ್ವಾತಂತ್ರ್ಯ ಪೂರ್ವದಲ್ಲಿ 'ಆಡಳಿತ ಭಾಷೆ' – ಅದರಲ್ಲಿಯೂ, ಬ್ರಿಟಿಷರ ನಿಯಂತ್ರಣದ ಕಾಲಾವಧಿಯಲ್ಲಿ ಕನ್ನಡವು ಆಡಳಿತ ಭಾಷೆಯಾಗಿ ಬಳಕೆಯಾದ ವಿಚಾರವನ್ನು ಆ ಕಾಲದಲ್ಲಿ ಬ್ರಿಟಿಷ್ ಪ್ರಭುತ್ವ ಹಾಗೂ ಮೈಸೂರು ಸಂಸ್ಥಾನವು ಹೊರಡಿಸಿದ ನೂರಾರು ಬಗೆಯ ಕಾಗದ ಪತ್ರಗಳನ್ನು ಅವಲೋಕಿಸಿದಾಗ ಅರಿಯಬಹುದು. ಆಗಿನ ಕನ್ನಡ ಭಾಷಾಪ್ರಯೋಗ ಕಂಡು ಅಚ್ಚರಿಗೊಳ್ಳಬಹುದು. ಉರ್ದು, ಮರಾಠಿ, ಪರ್ಷಿಯಾ, ಇಂಗ್ಲಿಷ್ ಮೊದಲಾದ ಭಾಷೆಗಳನ್ನು ಸಮ್ಮಿಶ್ರ ಮಾಡಿದ ಪ್ರಯೋಗಗಳನ್ನು ಕಾಣಬಹುದು. ಈ ಪತ್ರಗಳಲ್ಲಿ ಬಳಕೆಯಾಗಿರುವ ಅಧಿಕಾರದ ಭಾಷೆ, ಕಾಲಾನುಕ್ರಮದಲ್ಲಿ ಹೇಗೆ ಬದಲಾಗುತ್ತಾ ಇಂದಿನ ಆಡಳಿತ ಭಾಷೆಯಾಗಿ ಕನ್ನಡವನ್ನು ರೂಪಿಸಿತು ಎನ್ನುವುದನ್ನು ಮನಗಾಣಬಹುದು. ಹೀಗೆ, ಅನ್ಯ ಆಡಳಿತವಿದ್ದ ಸಂದರ್ಭಗಳಲ್ಲಿಯೇ ಕನ್ನಡವನ್ನು ಸಮರ್ಥವಾಗಿ ಬಳಕೆ ಮಾಡಿರುವ ನಿದರ್ಶನಗಳು ನಮಗೆ ಸ್ಫೂರ್ತಿ ತುಂಬಬೇಕು. ಆಡಳಿತದ ಭಾಷೆಯಾಗಿ



ಕನ್ನಡವನ್ನು ಅತ್ಯಂತ ಪರಿಣಾಮಕಾರಿಯಾಗಿ ಬಳಸುವ ಸಂಕಲ್ಪವನ್ನು ಮತ್ತಷ್ಟು ದೃಢಗೊಳಿಸಬೇಕು.

ಆಡಳಿತದ ಭಾಷೆಯಾಗಿ ಕನ್ನಡದ ಸಾಮರ್ಥ್ಯವನ್ನು ಪರಿಗಣಿಸುವುದಾದರೆ, ಸಾವಿರಾರು ವರ್ಷಗಳ ಭವ್ಯ ಇತಿಹಾಸ ಹೊಂದಿರುವ ಕನ್ನಡವು ಅತ್ಯಂತ ಸಮರ್ಥವಾದ ಆಡಳಿತ ಭಾಷೆಯಾಗಿದೆ. ಕನ್ನಡವು ಯಾವ ಕಾಲಘಟ್ಟದಲ್ಲಿ ಆಡಳಿತ ಭಾಷೆಯಾಯಿತು ಎಂಬುದನ್ನು ಇತಿಹಾಸವು ನಿರ್ಣಯಿಸುತ್ತದೆ. ಸ್ವತಂತ್ರ ಭಾರತವು ಪ್ರಾದೇಶಿಕ ಭಾಷಾ ಮಾನದಂಡದ ಮೇಲೆ ಹಲವು ರಾಜ್ಯಗಳನ್ನು ಪುನರ್ ರಚಿಸಿ, ಒಕ್ಕೂಟ ವ್ಯವಸ್ಥೆಯನ್ನು ಸ್ಥಾಪಿಸಿಯಾದ ಮೇಲೆ ರೂಪುಗೊಂಡ ಕರ್ನಾಟಕವು, ಕನ್ನಡವನ್ನೇ ಹೆಚ್ಚು ಮಾತನಾಡುವ